**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.3047/2024**

**ಸಿ.ಡಬ್ಲ್ಯೂ-1**

**ಪಿ.ಡಬ್ಲ್ಯೂ-2**

| | |
|---|---|
| ಸಾಕ್ಷಿಯ ಹೆಸರು | : ಶಿವಾಜಿ ಗೊಳಸಂಗಿ |
| ತಂದೆ/ಗಂಡನ ಹೆಸರು | : ವಾಸುದೇವ |
| ವಯಸ್ಸು | : 50 ವರ್ಷ |
| ಉದ್ಯೋಗ | : ಪಿ.ಎಸ್.ಐ. |
| ವಾಸಸ್ಥಳ | : ಇಂಡಿ ಗ್ರಾಮೀಣ ಪೊಲೀಸ ಠಾಣೆ |

**ದಿನಾಂಕ:21-05-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>**

ನಾನು ಜುಲ್ಲೆ 2022 ರಿಂದ ಜುಲೈ 2024 ರವರೆಗೆ ಪಿ.ಎಸ್.ಐ ಅಂತಾ ಝಳಕಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01.07.2024 ರಂದು 12.30 ಗಂಟೆ ಸುಮಾರಿಗೆ ಠಾಣಾ ಕರ್ತವ್ಯದಲ್ಲಿದ್ದಾಗ ಡಿ.ಎಸ್.ಪಿ. ವಿಶೇಷ ತಂಡದ ಸಿಬ್ಬಂದಿಯಾದ ಚಾಸಾ 5 ರವರು ಭತಗುಣಕಿ ಗ್ರಾಮದ ಪತ್ರಾಸ ಶೆಡ್ಡಿನಲ್ಲಿ ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ನಮಗೆ ಬಾತ್ಮಿ ತಿಳಿಸಿರುತ್ತಾರೆ. ನಂತರ ಸದರಿ ಬಾತ್ಮಿ ವಿಷಯವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನದ ಮೇರೆಗೆ ನಂತರ ಚಾಸಾ 6 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ ಮೇರೆಗೆ ಅವರು ಇಬ್ಬರು ಪಂಚರಿಗೆ ಹಾಜರುಪಡಿಸಿದ್ದು ಅವರಿಗೂ ಸಹ ಬಾತ್ಮಿ ವಿಷಯವನ್ನು ತಿಳಿಸಿದ್ದು ನಂತರ ನಾನು ಹಾಗೂ ಚಾಸಾ 2 ರಿಂದ 6 ರವರು ಬಾತ್ಮಿ ಸ್ಥಳಕ್ಕೆ ಹೋಗಿ ನೋಡಿ ದೂರದಲ್ಲಿ ನಿಂತು ನೋಡಲಾಗಿ ಇಬ್ಬರು ವ್ಯಕ್ತಿಗಳು ಸರಾಯಿ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ನಾವು ಗೇರಾವು ಹಾಕಿ ಅಲ್ಲಿ ಇದ್ದ ಸಾರ್ವಜನಿಕರು ಓಡಿ ಹೋಗಿದ್ದು ಸದರಿ ಸರಾಯಿ ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಹಿಡಿದಿರುತ್ತೇವೆ. ಶೆಡ್ಡಿನಲ್ಲಿದ್ದ ಬಾಕ್ಸನ್ನು ಪರಿಶೀಲಿಸಲಾಗಿ ಡಿ.ಕೆ. ವಿಸ್ಕಿಯ 90 ಎಮ್.ಎಲ್.ನ 150 ಪೌಚುಗಳು, ಹೈವರ್ಡ್ಸ ವಿಸ್ಕಿಯ 90 ಎಮ್.ಎಲ್.ನ 69 ಪೌಚುಗಳು, ಓ.ಸಿ. ವಿಸ್ಕಿಯ 90

ಎಮ್.ಎಲ್.ನ 85 ಪೌಚುಗಳು ಇರುವುದು ಕಂಡುಬಂದಿರುತ್ತದೆ. ಸದರಿ ಪೌಚುಗಳನ್ನು ಪಂಚರ ಸಮಕ್ಷಮ ಅವುಗಳನ್ನು ಜಪ್ತಿಪಡಿಸಿಕೊಂಡು ರಾ.ಪ. ಕುರಿತು ಎಲ್ಲಾ ಸರಾಯಿ ಟೆಟ್ರಾ ಪೌಚುಗಳನ್ನು ತೆಗೆದಿರುತ್ತೇವೆ. ಪಂಚನಾಮೆಯನ್ನು 02.15 ರಿಂದ 03.15 ರ ವರೆಗೆ ಮಾಡಿರುತ್ತೇನೆ. ಆರೋಪಿತರ ಹೆಸರುಗಳನ್ನು ಕೇಳಲಾಗಿ ಅವರ ಹೆಸರು ಅರವಿಂದ ಮತ್ತು ಪರಶುರಾಮ ಎಂದು ತಿಳಿಸಿರುತ್ತಾರೆ. ನಂತರ ಮುದ್ದೆಮಾಲು, ಆರೋಪಿತರು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ಹಾಜರಾಗಿ ಸರ್ಕಾರದ ಪರವಾಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ನಿ.ಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಬಿ) ಎಂದು, ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು, ಸಾಕ್ಷಿಯು ಪ್ರ.ವ.ವ.ವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ. ಬಿ.ಬಿ.ಬಿ.(ಐ).ವಕೀಲರಿಂದಃ</u>**

ಖಚಿತ ಬಾತ್ಮಿ ಬಂದ ನಂತರ ನಾನು ಠಾಣೆಯಲ್ಲಿ ಪ್ರ.ವ.ವ.ವನ್ನು ಮಾಡಿಕೊಂಡು ಹೋಗಿರುವುದಿಲ್ಲ. ಪ್ರ.ವ.ವ.ವನ್ನು ಮಾಡಿಕೊಂಡು ಹೋಗುವುದಕ್ಕೆ ತೊಂದರೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಸ್ಥಳಕ್ಕೆ ಹೋಗಿ ಬಾತ್ಮಿಯನ್ನು ಖಚಿತಪಡಿಸಿಕೊಳ್ಳುವ ಕಾರಣದಿಂದ ಪ್ರ.ವ.ವ.ವನ್ನು ಮಾಡಿರುವುದಿಲ್ಲ. ಪಂಚರುಗಳು ಯಾವ ಊರಿನವರು ಎಂದು ನನಗೆ ನೆನಪಿಲ್ಲ. ಭತಗುಣಕಿ ಗ್ರಾಮ ಝಳಕಿಯಿಂದ 10 ಕಿ.ಮೀ. ದೂರ ಇರುತ್ತದೆ. 4 ಚಕ್ರ ವಾಹನದಲ್ಲಿ ಸಾಮಾನ್ಯವಾಗಿ ಸದರಿ ಭತಗುಣಕಿ ಗ್ರಾಮಕ್ಕೆ ಝಳಕಿಯಿಂದ ಹೋಗಲು 35 ರಿಂದ 40 ನಿಮಿಷ ಬೇಕಾಗುತ್ತದೆ. ಪತ್ರಾಸ ಶೆಡ್ಡು ಯಾರಿಗೆ ಸಂಬಂಧಿಸಿರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ಪತ್ರಾಸ ಶೆಡ್ಡಿನ ಚಕ್ಕಬಂದಿ ಉತ್ತರಕ್ಕೆ- ಹಲಸಂಗಿ ಮತ್ತು ಇಂಡಿ ರಸ್ತೆ, ದಕ್ಷಿಣಕ್ಕೆ- ಗ್ರಾಮ ರಸ್ತೆ, ಪೂರ್ವಕ್ಕೆ-ಗ್ರಾಮ ರಸ್ತೆ, ಪಶ್ಚಿಮಕ್ಕೆ - ಹೊರವಲಯ ಇರುತ್ತದೆ. ನಾವು ಆ ದಿನ ಬಾತ್ಮಿ ಸ್ಥಳಕ್ಕೆ ಹೋದಾಗ ಮದ್ಯಾಹ್ನ 2 ಗಂಟೆಯಾಗಿತ್ತು. ನಾವು 200 ರಿಂದ 300 ಮೀಟರ ಅಂತರದಲ್ಲಿ ನಿಂತು ವಾಚ್ ಮಾಡಿರುತ್ತೇವೆ. ಆ ಸಮಯದಲ್ಲಿ 3-4 ಜನರು ನಿಂತಿದ್ದರು. ಸದರಿ ಪತ್ರಾಸ ಶೆಡ್ಡಿಗೆ ಒಂದೇ ಬಾಗಿಲು ಇತ್ತು. ಸದರಿ ಬಾತ್ಮಿ ಸ್ಥಳವು ಜನನಿಬಿಡ ಪ್ರದೇಶ ಎಂದರೆ ಸರಿ. ನಾನು ಅಲ್ಲಿನ ಜನರ



ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ದಿಃ01.07.2024 ರಂದು ನನಗೆ ಖಚಿತ ಬಾತ್ಮಿ ಬಂದಿದ್ದು ಸದರಿ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ನಾವೆಲ್ಲರೂ ಬಾತ್ಮಿ ಸ್ಥಳಕ್ಕೆ ರೇಡ್ ಮಾಡಲು ಹೋಗಿರುತ್ತೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ 5 ರವರಿಗೆ ಪಂಚರನ್ನು

ಕರೆದುಕೊಂಡು ಬರುವಂತೆ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾವು ಬಾತ್ಮಿ ಸ್ಥಳದಿಂದ ಸ್ವಲ್ಪ ದೂರದಿಂದ ನಿಂತು ವಾಚ್ ಮಾಡಲಾಗಿ ಅಲ್ಲಿ ಆರೋಪಿತರು ಸರಾಯಿ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ನಮ್ಮ ಸಿಬ್ಬಂದಿಗಳು ಆರೋಪಿತರನ್ನು ಗೆರಾವು ಹಾಕಿ ಹಿಡಿದಿದ್ದು ಉಳಿದವರು ಓಡಿ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ.ಕೆ. ವಿಸ್ಕಿಯ 90 ಎಮ್.ಎಲ್.ನ 150 ಪೌಚುಗಳು, ಹೈವರ್ಡ್ಸ ವಿಸ್ಕಿಯ 90 ಎಮ್.ಎಲ್.ನ 69 ಪೌಚುಗಳು, ಓ.ಸಿ. ವಿಸ್ಕಿಯ 90 ಎಮ್.ಎಲ್.ನ 85 ಪೌಚುಗಳಿಗೆ ಬ್ಯಾಚ್ ನಂಬರ ಮತ್ತು ಸಿರಿಯಲ್ ನಂಬರ ಇರುತ್ತದೆ ಎಂದರೆ ಸರಿ. ಸದರಿ ಬ್ಯಾಚ್ ನಂಬರ ಮತ್ತು ಸಿರಿಯಲ್ ನಂಬರನ್ನು ನಿ.ಪಿ.2 ರಲ್ಲಿ ಬರೆಸಿರುವುದಿಲ್ಲ. ಈ ಮೇಲೆ ಹೇಳಿದ ಮುದ್ದೆಮಾಲುಗಳನ್ನು ಆರೋಪಿತರಿಂದ ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಮುದ್ದೆಮಾಲುಗಳಂತೆ ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಮುದ್ದೆಮಾಲುಗಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ರಾ.ಪ. ಕುರಿತು ತೆಗೆದಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ನಾನೇ ಬರೆದಿರುತ್ತೇನೆ. ಪಂಚನಾಮೆಯನ್ನು ಬರೆಯುವುದಕ್ಕೆ ಪಂಚರು ಮಾಹಿತಿ ನೀಡಿರುತ್ತಾರೆ. ಪಂಚನಾಮೆಯನ್ನು ಬರೆಯುವುದಕ್ಕೆ ಪಂಚರು ಮಾಹಿತಿ ನೀಡಿರುತ್ತಾರೆ ಎಂದು ಸುಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು 02.15 ರಿಂದ 03.15 ರ ವರೆಗೆ ಮಾಡಿರುತ್ತೇನೆ ಎಂದು ಸುಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**